ಶ್ರೀ ಸಿ.ಟಿ. ರವಿ:– ನೀವು ಮೇಲ್ಪಂಕ್ತಿ ಹಾಕುವುದಾದರೆ ಅವರಿಂದ ರಾಜೀನಾಮೆಯನ್ನು ಪಡೆದುಕೊಳ್ಳಬೇಕಾಗಿತ್ತೇ ಹೊರತು ಈ ಸದನ ಮುಖಾಂತರ ಕೇಳುವುದಲ್ಲ.

ಅಧ್ಯಕ್ಷರು:– ಮಾನ್ಯ ರವಿಯವರೇ, ಸಾಕು ಇಲ್ಲಿಗೆ ಬಿಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಚರ್ಚೆಯಾಗಲಿ. ಆದ್ದರಿಂದ, ಚರ್ಚೆಗೆ ತಾವು ಅವಕಾಶ ಕೊಡಬೇಕು. ನೈತಿಕವಾಗಿ ಅವರು ಉತ್ತರ ಕೊಡಬಾರದೆಂದು ನಾನು ಆಗ್ರಹಿಸುತ್ತೇನೆ.

ಅಧ್ಯಕ್ಷರು:– ಆಯಿತು ಬಿಡಿ. ಈಗ ಪ್ರಶ್ನೋತ್ತರ ವೇಳೆ. ಮಾನ್ಯ ಕೋಳಿವಾಡರವರೆ, ತಾವು ಪ್ರಶ್ನೆ ಕೇಳಿ.

3. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು,

ನಗರೋತ್ಥಾನ ಯೋಜನೆ ಅಡಿ ರಸ್ತೆಗಳು

61(159); ಶ್ರೀ ಕೋಳಿವಾಡ ಕೆ.ಬಿ. (ರಾಣೆಬೆನ್ನೂರು)

ಅ) ಹಾವೇರಿ ಜಿಲ್ಲೆ ಪ್ರತಿ ತಾಲ್ಲೂಕಿನಲ್ಲಿ ನಗರೋತ್ಥಾನ ಯೋಜನೆಯಲ್ಲಿ ಯಾವ ತಾಲ್ಲೂಕಿನಲ್ಲಿ ಎಷ್ಟು ಕಿ.ಮೀ ರಸ್ತೆ ಮಂಜೂರಾಗಿದೆ; ಮಂಜೂರಾದ ರಸ್ತೆಗಳಲ್ಲಿ ಎಷ್ಟು ಕಿ.ಮೀ. ಪೂರ್ಣಗೊಂಡಿದೆ; ಉಳಿದ ಕಿ.ಮೀ. ರಸ್ತೆ ಮಾಡಲು ವಿಳಂಬಕ್ಕೆ ಕಾರಣಗಳೇನು;

ಆ) ಒಳ ಚರಂಡಿ ಯೋಜನೆ ಹಾವೇರಿ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಎಷ್ಟು ಕಿ.ಮೀ. ಉದ್ದ ಮಂಜೂರಾಗಿದೆ; ಎಷ್ಟು ಬಾಕಿ ಇದೆ; ವಿಳಂಬಕ್ಕೆ ಕಾರಣಗಳೇನು?

ಶ್ರೀ ಖುಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ಹಾವೇರಿ ಜಿಲ್ಲೆಯ ಸಿಎಂಎಸ್ಎಂಟಿಡಿಪಿ ನಗರೋತ್ಥಾನ ಮೊದಲನೇ ಮತ್ತು ಎರಡನೇ ಹಂತದ ಯೋಜನೆಯಲ್ಲಿ ಮಂಜೂರಾದ ರಸ್ತೆ ಕಾಮಗಾರಿಗಳ ಉದ್ದ, ಪೂರ್ಣಗೊಂಡಿರುವ ರಸ್ತೆ ಕಾಮಗಾರಿಗಳ ಉದ್ದ ಮತ್ತು ಪ್ರಗತಿಯಲ್ಲಿರುವ ರಸ್ತೆ ಕಾಮಗಾರಿಗಳ ಉದ್ದದ ವಿವರಗಳನ್ನು **ಅನುಬಂಧ–1** ರಲ್ಲಿ ನೀಡಲಾಗಿದೆ.

1. ಸಿಎಂಎಸ್ಎಂಟಿಡಿಪಿ ನಗರೋತ್ಥಾನ ಮೊದಲನೇ ಹಂತ :

ಸಿ.ಎಂ.ಎಸ್.ಎಂ.ಟಿ.ಡಿ.ಪಿ ನಗರೋತ್ಥಾನ ಮೊದಲನೇ ಹಂತದ ಯೋಜನೆಯಲ್ಲಿ ಹಾವೇರಿ ನಗರಸಭೆಯನ್ನು ಹೊರತುಪಡಿಸಿ ಉಳಿದೆಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಹಾವೇರಿ ನಗರಸಭೆಯಲ್ಲಿ ಕಾಮಗಾರಿಗಳ ಅನುಷ್ಠಾನದಲ್ಲಿನ ವಿಳಂಬಕ್ಕೆ ಈ ಕೆಳಕಂಡ ಕಾರಣಗಳಾಗಿರುತ್ತದೆ:

i) ಹಾವೇರಿ ನಗರ ವ್ಯಾಪ್ತಿಯಲ್ಲಿ ಹೊಸದಾಗಿ ಯು.ಜಿ.ಡಿ. ಕಾಮಗಾರಿಗಳು ಅನುಷ್ಠಾನಗೊಳಿಸುತ್ತಿರುವುದರಿಂದ ಯು.ಜಿ.ಡಿ. ಕಾಮಗಾರಿಗಳು ಪೂರ್ಣಗೊಳ್ಳುವವರೆಗೂ ರಸ್ತೆ ಕಾಮಗಾರಿಗಳನ್ನು ತಡೆ ಹಿಡಿಯಲಾಗಿದೆ.

ii) ಅನುಮೋದನೆಯಾದ ಕ್ರಿಯಾಯೋಜನೆಯ ಪ್ರಕಾರ ಟೆಂಡರ್ ಕರೆಯದೇ ಕಾಮಗಾರಿಗಳನ್ನು ವಿಭಜಿಸಿ ಟೆಂಡರ್ ಕರೆದ ಕಾರಣಗಳಿಂದಾಗಿ ಕಾಮಗಾರಿಗಳನ್ನು ತಡೆ ಹಿಡಿಯಲಾಗಿದೆ.

iii) ಕ್ರಿಯಾ ಯೋಜನೆಯಲ್ಲಿರುವ ಕೆಲವೊಂದು ಕಾಮಗಾರಿಗಳು ಬೇರೆ ಯೋಜನೆಯಡಿ ಈಗಾಗಲೇ ಕೈಗೊಳ್ಳಲಾಗಿರುವುದಿಂದ ಕಾಮಗಾರಿಗಳನ್ನು ತಡೆ ಹಿಡಿಯಲಾಗಿದೆ.

2. ಸಿಎಂಎಸ್ಎಂಟಿಡಿಪಿ ನಗರೋತ್ಥಾನ ಎರಡನೇ ಹಂತ:

ಸಿ.ಎಂ.ಎಸ್.ಎಂ.ಟಿ.ಡಿ.ಪಿ ನಗರೋತ್ಥಾನ ಎರಡನೇ ಹಂತದ ಯೋಜನೆಯ ರಾಣೆಬೆನ್ನೂರು ನಗರಸಭೆ, ಬ್ಯಾಡಗಿ ಮತ್ತು ಬಂಕಾಪುರ ಪುರಸಭೆ ಮತ್ತು ಹಿರೇಕೆರೂರು ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಕಾಮಗಾರಿಗಳ ಸ್ಥಳ ಹಸ್ತಾಂತರವನ್ನು ಆಗಸ್ಟ್, 2013ರಲ್ಲಿ ಮಾಡಲಾಗಿರುತ್ತದೆ ಹಾಗೂ ಉಳಿದ ಹಾವೇರಿ ನಗರಸಭೆ, ಹಾನಗಲ್, ಸವಣೂರು ಮತ್ತು ಶಿಗ್ಗಾಂವ ಪುರಸಭೆಯ ವ್ಯಾಪ್ತಿಯಲ್ಲಿ ಕಾಮಗಾರಿಗಳ ಸ್ಥಳ ಹಸ್ತಾಂತರವನ್ನು ಸೆಪ್ಟೆಂಬರ್, 2013ರಲ್ಲಿ ಮಾಡಲಾಗಿರುತ್ತದೆ. ಗುತ್ತಿಗೆದಾರರು ಕಾಮಗಾರಿಗಳನ್ನು ಆಗಸ್ಟ್, 2014 ಮತ್ತು ಸೆಪ್ಟೆಂಬರ್, 2014ರ ಒಳಗೆ ಪೂರ್ಣಗೊಳಿಸಬೇಕಾಗಿರುತ್ತದೆ. ಕಾಮಗಾರಿಗಳ ಅನುಷ್ಠಾನದಲ್ಲಿ ವಿಳಂಭವಾಗಲು ಲೋಕಸಭಾ ಚುನಾವಣಾ ಮಾದರಿ ನೀತಿ ಸಂಹಿತೆಯು ಮತ್ತು ಮರಳು ಹಾಗೂ ಜಲ್ಲಿಯ ಅಲಭ್ಯತೆಯು ಮುಖ್ಯ ಕಾರಣಗಳಾಗಿರುತ್ತದೆ.

ಆ) ಕೆ.ಯು.ಐ.ಡಿ.ಎಫ್.ಸಿ. ವತಿಯಿಂದ:

ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿ ಹಾವೇರಿ ಜಿಲ್ಲೆಯಲ್ಲಿ ಈ ಕೆಳಕಂಡ ಪಟ್ಟಣಗಳಲ್ಲಿ ಒಳಚರಂಡಿ ಯೋಜನೆ ಕೈಗೊಂಡಿದೆ:

ಹಾವೇರಿ ಪಟ್ಟಣ:

ಹಾವೇರಿ ಜಿಲ್ಲೆಯ ಹಾವೇರಿ ನಗರದಲ್ಲಿ ಒಳಚರಂಡಿ ಕಾಮಗಾರಿ ಯೋಜನೆಯನ್ನು ` 32.571 ಕೋಟಿ ವೆಚ್ಚದಲ್ಲಿ ಹಮ್ಮಿಕೊಳ್ಳಾಗಿದೆ. ಈ ಯೋಜನೆಯ ಅಂಶಗಳು ಕೆಳಕಂಡಂತಿದೆ:

63.72 ಕಿ.ಮೀ. ಉದ್ದ (ಮುಖ್ಯ ಕೊಳವೆ 11.89 ಕಿ.ಮಿ. (Trunkmain) ಹಾಗೂ ಸಣ್ಣ (ಉಪ) ಕೊಳವೆ 51.83 ಕಿ.ಮಿ. (Sub main, Laterals) ಮಂಜೂರಾಗಿದ್ದು, 51.26 ಕಿ.ಮಿ. ಉದ್ದದ ಕಾರ್ಯ ಆಗಿದೆ. 12.46 ಕಿ.ಮಿ. ಉದ್ದದ ಕೊಳವೆ ಕಾರ್ಯ ಬಾಕಿ ಉಳಿದಿದೆ. ಇದರಲ್ಲಿ ಮುಖ್ಯವಾದ ಕೊಳವೆ 1.25 ಕಿ.ಮಿ ಹಾಗೂ ಉಪ ಕಾಲವೆ 11.21 ಕಿ.ಮಿ. ಒಳಗೊಂಡಿದೆ

ಕಾಮಗಾರಿ ವಿಳಂಭಕ್ಕೆ ಈ ಕೆಳಕಂಡ ಅಂಶಗಳು ಕಾರಣಗಳಾಗಿವೆ:

- ಒಳಚರಂಡಿ ಕೊಳವೆ ಮಾರ್ಗದ ಅಗೆತದಲ್ಲಿ ಅಂದಾಜಿಗಿಂತ ಹೆಚ್ಚಿನ ಪ್ರಮಾಣದ ಕಲ್ಲಿನ ಪದರು ಬಂದಿದ್ದರಿಂದ.
- ಕೊಳವೆ ಪಥದಲ್ಲಿ ಬದಲಾವಣೆಯಾಗಿ ವಿನ್ಯಾಸ ಕಾರ್ಯ ಕೈಗೊಂಡು ಮಾರ್ಪಡಿತ ನಕ್ಷೆ ತಯಾರಿಸಲು ಸಮಯ ಬೇಕಾಗಿದ್ದರಿಂದ.
- ಸಾರ್ವಜನಿಕರಿಂದ ವಿರೋಧ, ಅಡೆತಡೆ.
- ವಿಪರೀತ ಮಳೆ ಕಾರಣದಿಂದ.
- ಕಾಮಗಾರಿ ಕಾರ್ಯದಲ್ಲಿ ಸಾರ್ವಜನಿಕ ಸೌಲಭ್ಯಗಳಾದ ನೀರಿನ ಕೊಳವೆ, ಸಂಪರ್ಕ ಜೋಡಣೆ ಪಥ (Communication line) ಬಂದಿದ್ದರಿಂದ ಸ್ಥಳಾಂತರಗೊಳಿಸಲು ಹಾಗೂ ಮನೆಗಳ ಶೌಚ ತಾಜ್ಯ ನೀರು ಬಂದಿದ್ದರಿಂದ.

- ಕಟ್ಟಡ ಸಾಮಗ್ರಿಗಳಾದ ಸಿಮೆಂಟ್ ಹಾಗೂ ಮರಳು ನಿಗಧಿತ ಸಮಯದಲ್ಲಿ ಲಭ್ಯವಾಗದೇ ಇದ್ದುದರಿಂದ.
- ಇಕ್ಕಟ್ಟಾದ ಸ್ಥಳಗಳಲ್ಲಿ ಪೈಪ್‌ಲೈನ್ ಕಾಮಗಾರಿ ಕೈಗೊಂಡ ನಂತರ ರಸ್ತೆ ದುರಸ್ಥಿ ಕಾರ್ಯಕ್ಕಾಗಿ ಹೆಚ್ಚಿನ ಸಮಯ ಬೇಕಾಗಿದ್ದರಿದ.
- ಗುತ್ತಿಗೆದಾರರ ಕಡಿಮೆ ಪ್ರಮಾಣದಲ್ಲಿ ಕೆಲಸ ನಿರ್ವಹಿಸಿದ್ದರಿಂದ.

ರಾಣೇಬೆನ್ನೂರು ಪಟ್ಟಣ:

ರಾಣೇಬೆನ್ನೂರು ನಗರಕ್ಕೆ ` 35.53 ಕೋಟಿ ವೆಚ್ಚದಲ್ಲಿ ಒಳಚರಂಡಿ ಕಾಮಗಾರಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯ ಅಂಶಗಳು ಕೆಳಕಂಡಂತಿದೆ.

ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕೆ ಕಾರ್ಯಕ್ರಮದಡಿಯಲ್ಲಿ ಒಟ್ಟು 65.14 ಕಿ.ಮೀ ಒಳಚರಂಡಿ ಕಾಮಗಾರಿ ಮಂಜೂರಾಗಿದ್ದು, ಅದರಲ್ಲಿ ಈವರೆವಿಗೆ (ದಿನಾಂಕ: 21.06.2014) 56.06 ಕಿ.ಮೀ. ಕಾಮಗಾರಿ ಆಗಿದ್ದು, 9.06 ಕಿ.ಮೀ ಕಾಮಗಾರಿ ಬಾಕಿ ಉಳಿದಿರುತ್ತದೆ.

ರಾಣೇಬೆನ್ನೂರು ನಗರದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಿದಾಗ ಊಹಿಸಿದ್ದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಬಂಡೆ ಕಲ್ಲುಗಳು ಕಾಮಗಾರಿ ನಿರ್ವಹಿಸುವಾಗ ಬಂದಿದ್ದರಿಂದ ಹಾಗೂ ಗುತ್ತಿಗೆದಾರರ ಕೆಲವೊಂದು ಸಮಸ್ಯೆಗಳಿಂದ ಕಾಮಗಾರಿ ವಿಳಂಭವಾಗಿರುತ್ತದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ:

ರಾಜ್ಯ ನಗರ ಸ್ಥಳೀಯ ಸಂಸ್ಥೆಗಳು ಅಂದರೆ, ನಗರಸಭೆ ಪುರಸಭೆ ಮತ್ತು ಪಟ್ಟಣ ಪಂಚಾಯ್ತಿಗಳ ವ್ಯಾಪ್ತಿಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯ ಯೋಜನೆಗಳನ್ನು ತಯಾರಿಸಿ

ಮಂಡಳಿವತಿಯಿಂದ ಕಾರ್ಯಗತಗೊಳಿಸಿ, ನಂತರ ಸ್ಥಳೀಯ ಸಂಸ್ಥೆಗೆ ಹಸ್ತಾಂತರಗೊಳಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ. ಗ್ರಾಮೀಣ ಪ್ರದೇಶಗಳು ಮಂಡಳಿಯ ವ್ಯಾಪ್ತಿಗೆ ಬರುವುದಿಲ್ಲ, ಹಾವೇರಿ ಜಿಲ್ಲೆಯಲ್ಲಿ ಒಟ್ಟು 7 ತಾಲ್ಲೂಕು ಕೇಂದ್ರಗಳಿದ್ದು, ಇವುಗಳಲ್ಲಿ 2 ನಗರ ಮತ್ತು 6 ಪಟ್ಟಣಗಳು ಬರುತ್ತಿದ್ದು, ಇವುಗಳ ಪೈಕಿ ಮಂಡಳಿ ವತಿಯಿಂದ ಕೈಗೊಂಡಿರುವ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ:

ಬ್ಯಾಡಗಿ ತಾಲ್ಲೂಕು:

ಬ್ಯಾಡಗಿ ಪಟ್ಟಣಕ್ಕೆ ಯಾವುದೇ ಒಳಚರಂಡಿ ಯೋಜನೆಯ ಪ್ರಸ್ತಾವನೆ ಇರುವುದಿಲ್ಲ.

ಹಾನಗಲ್ ತಾಲ್ಲೂಕು:

ಹಾನಗಲ್ ಪಟ್ಟಣಕ್ಕೆ ಯಾವುದೆ ಒಳಚರಂಡಿ ಯೋಜನೆಯ ಪ್ರಸ್ತಾವನೆ ಇರುವುದಿಲ್ಲ.

ಶಿಗ್ಗಾಂವ ತಾಲ್ಲೂಕು:

ಶಿಗ್ಗಾಂವ ಪಟ್ಟಣಕ್ಕೆ ಒಳಚರಂಡಿ ಯೋಜನೆಯು ತಯಾರಿಕೆ ಹಂತದಲ್ಲಿರುವುದು.

ಬಂಕಾಪುರ ಪಟ್ಟಣ:

ಬಂಕಾಪುರ ಪಟ್ಟಣಕ್ಕೆ ಒಳಚರಂಡಿ ಯೋಜನೆಯು ತಯಾರಿಕೆ ಹಂತದಲ್ಲಿರುವುದು.

ಸವಣೂರು ತಾಲ್ಲೂಕು:

ಸವಣೂರು ಪಟ್ಟಣಕ್ಕೆ ಒಳಚರಂಡಿ ಯೋಜನೆಯು ತಯಾರಿಕೆ ಹಂತದಲ್ಲಿರುವುದು.

ಹಿರೇಕೆರೂರು ತಾಲ್ಲೂಕು:

ಹಿರೇಕೆರೂರು ಪಟ್ಟಣದಲ್ಲಿ ಒಟ್ಟು 36.30 ಕಿ.ಮೀ ಉದ್ದದ ಒಳಚರಂಡಿ ಕೊಳವೆ ಮಾರ್ಗ ಮಂಜೂರಾಗಿದೆ. ಇದುವರೆಗೂ ಯಾವುದೇ ಕಾಮಗಾರಿ ನಿರ್ವಹಿಸಿರುವುದಿಲ್ಲ. ಯೋಜನೆಯ ಪೂರ್ಣ ಕಾಮಗಾರಿ ಬಾಕಿ ಇರುವುದು. ಇದುವರೆಗೂ ಕಾಮಗಾರಿಯು ಪ್ರಾರಂಭವಾಗದೇ ಇರಲು ಯೋಜನೆಯ ಮಂಜೂರಾತಿ ಆದೇಶದಲ್ಲಿ ಮಲಿನ ಶುದ್ಧೀಕರಣ ಘಟಕದ ನಿವೇಶನವನ್ನು ಪಟ್ಟಣ ಪಂಚಾಯಿತಿಯವರು ಹಸ್ತಾಂತರಿಸಿದ ನಂತರವೇ ಟೆಂಡರ್ ಪ್ರಕ್ರಿಯೆ ಮಾಡಲು ಷರತ್ತು ಇದ್ದುದರಿಂದ ವಿಳಂಭವಾಗಿದೆ. ದಿನಾಂಕ: 22–06–2012ರಲ್ಲಿ ಪಟ್ಟಣ ಪಂಚಾಯಿತಿಯವರು ರಿ.ಸ.ನಂ.149ರಲ್ಲಿ ತ್ಯಾಜ್ಯ ವಸ್ತು ವಿಲೇವಾರಿ ಜಮೀನಿನಲ್ಲಿ 4–0 ಎಕರೆಯನ್ನು ಮಂಡಳಿಗೆ ಹಸ್ತಾಂತರಿಸಿದ್ದರು. ಆದರೆ, ಬಸರೀಹಳ್ಳಿ ಗ್ರಾಮದ ನಾಗರೀಕರು ಸದರಿ ಸ್ಥಳದಲ್ಲಿ ನಿರ್ಮಾಣ ಮಾಡದಿರಲು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರು. ಆದರೆ, ಈಗ ಸ್ಥಳದ ಬಗ್ಗೆ ನ್ಯಾಯಾಲಯದಲ್ಲಿ ತೀರ್ಪು ಪಟ್ಟಣ ಪಂಚಾಯ್ತಿ ಪರವಾಗಿ ಬಂದಿರುತ್ತದೆ. ಯೋಜನೆಗೆ ಈಗಾಗಲೇ ತಾಂತ್ರಿಕ ಮಂಜೂರಾತಿ ನೀಡಲಾಗಿರುತ್ತದೆ. ಈ ಸಂದರ್ಭದಲ್ಲಿ ಹಿರೇಕೆರೂರಿನ ಮಾನ್ಯ ಶಾಸಕರು ಗೃಹ ಸಂಪರ್ಕ ಮತ್ತು ರಸ್ತೆ ದುರಸ್ತಿ ಕೈಗೊಳ್ಳಲು ಕೋರಿದ್ದರಿಂದ ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಪ್ರತ್ಯೇಕ ಅಂದಾಜು ಪಟ್ಟಿ ತಯಾರಿಸಲಾಗುತ್ತಿದ್ದು, ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯಾದ ನಂತರ ಒಳಚರಂಡಿ ಯೋಜನೆಯನ್ನು ಒಟ್ಟಾಗಿ ಕೈಗೊಳ್ಳಲು ಕ್ರಮಕೈಗೊಳ್ಳಲಾಗುವುದು.

ಅನುಬಂದ–1

ಹಾವೇರಿ ಜಿಲ್ಲೆಯ ಸಿಎಂಎಸ್ಎಂಟಿಡಿಪಿ ನಗರೋತ್ಥಾನ ಹಂತ–1 ರ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ರಸ್ತೆ ಕಾಮಗಾರಿಗಳ ಭೌತಿಕ ಪ್ರಗತಿಯ ವಿವರ

ಕ್ರಮ ಸಂಖ್ಯೆ	ನಗರ ಸ್ಥಳೀಯ ಸಂಸ್ಥೆಯ ಹೆಸರು	ಮಂಜೂರಾದ ಕಾಮಗಾರಿಗಳ ರಸ್ತೆಯ ಉದ್ದ (ಕಿ.ಮೀ ಗಳಲ್ಲಿ)	ಕಾಮಗಾರಿಯನ್ನು ಪೂರ್ಣಗೊಳಿಸಿದ ರಸ್ತೆಯ ಉದ್ದ (ಕಿ.ಮೀ ಗಳಲ್ಲಿ)	ಕಾಮಗಾರಿ ಪ್ರಗತಿಯಲ್ಲಿರುವ ರಸ್ತೆ ಉದ್ದ (ಕಿ.ಮೀ ಗಳಲ್ಲಿ)	ಶೇಕಡಾವಾರು ಸಾಧಿಸಿದ ಪ್ರಗತಿ
1	ನಗರಸಭೆ ಹಾವೇರಿ	36.00	25.00	11.00	69.44
2	ನಗರಸಭೆ ರಾಣೇಬೆನ್ನೂರ	5.60	5.60	0.00	100.00
3	ಪುರಸಭೆ ಬ್ಯಾಡಗಿ	7.67	7.67	0.00	100.00
4	ಪುರಸಭೆ ಹಾನಗಲ್ಲ	9.20	9.20	0.00	100.00
5	ಪುರಸಭೆ ಸವಣೂರ	8.38	8.38	0.00	100.00
6	ಪುರಸಭೆ ಶಿಗ್ಗಾಂವ	2.35	2.35	0.00	100.00
7	ಪುರಸಭೆ ಬಂಕಾಪುರ	0.92	0.92	0.00	100.00
8	ಪಟ್ಟಣ ಪಂಚಾಯತಿ ಹಿರೇಕೆರೂರ	9.20	9.20	0.00	100.00
	ಒಟ್ಟು	79.32	68.32	11.00	86.13

ಹಾವೇರಿ ಜಿಲ್ಲೆಯ ಸಿಎಂಎಸ್‌ಎಂಟಿಡಿಪಿ ನಗರೋತ್ಥಾನ ಹಂತ–2 ರ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ರಸ್ತೆ ಕಾಮಗಾರಿಗಳ ಭೌತಿಕ ಪ್ರಗತಿಯ ವಿವರ

ಕ್ರಮ ಸಂಖ್ಯೆ	ನಗರ ಸ್ಥಳೀಯ ಸಂಸ್ಥೆಯ ಹೆಸರು	ಮಂಜೂರಾದ ಕಾಮಗಾರಿಗಳ ರಸ್ತೆಯ ಉದ್ದ (ಕಿ.ಮೀ ಗಳಲ್ಲಿ)	ಕಾಮಗಾರಿಯನ್ನು ಪೂರ್ಣಗೊಳಿಸಿದ ರಸ್ತೆಯ ಉದ್ದ (ಕಿ.ಮೀ ಗಳಲ್ಲಿ)	ಕಾಮಗಾರಿ ಪ್ರಗತಿಯಲ್ಲಿರುವ ರಸ್ತೆ ಉದ್ದ (ಕಿ.ಮೀ ಗಳಲ್ಲಿ)	ಶೇಕಡಾವಾರು ಸಾಧಿಸಿದ ಪ್ರಗತಿ
1	ನಗರಸಭೆ ಹಾವೇರಿ	32.26	5.75	26.50	17.84
2	ನಗರಸಭೆ ರಾಣೇಬೆನ್ನೂರ	31.00	12.50	18.50	40.32
3	ಪುರಸಭೆ ಬ್ಯಾಡಗಿ	8.01	7.82	0.19	97.58
4	ಪುರಸಭೆ ಹಾನಗಲ್ಲ	8.30	2.45	5.85	29.52
5	ಪುರಸಭೆ ಸವಣೂರ	4.47	1.10	3.37	24.60
6	ಪುರಸಭೆ ಶಿಗ್ಗಾಂವ	5.84	0.00	5.84	0.00
7	ಪುರಸಭೆ ಬಂಕಾಪುರ	7.71	1.91	5.81	24.71
8	ಪಟ್ಟಣ ಪಂಚಾಯತಿ ಹಿರೇಕೆರೂರ	8.066	2.15	5.92	26.59
	ಒಟ್ಟು	**105.65**	**33.67**	**71.98**	**31.87**

ಶ್ರೀ ಕೆ.ಬಿ. ಕೋಳಿವಾಡ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಸಂಪೂರ್ಣವಾಗಿ ಕೊಟ್ಟಿದ್ದಾರೆ. ಈ ನಗರೋತ್ಥಾನ ಯೋಜನೆಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಮಾನ್ಯ ಅಧ್ಯಕ್ಷರೆ, ನಗರೋತ್ಥಾನ ಯೋಜನೆಗಳ ಬಗ್ಗೆ ಚರ್ಚೆ ಆಗಬೇಕಾಗಿದೆ. ಇಡೀ ರಾಜ್ಯದಲ್ಲಿ ಇದರ ಸಮಸ್ಯೆ ಇದೆ. ಎಲ್ಲಿಯೂ ಕೂಡ ಕೆಲಸ ಆಗುತ್ತಿಲ್ಲ. ಟೆಂಡರ್ ಕರೆದಿದ್ದಾರೆ. ಆದರೆ, ಯಾವುದೇ ಕೆಲಸ ಆಗುತ್ತಿಲ್ಲ. ಎಲ್ಲರೂ ಬೆಂಗಳೂರಿಗೆ ಬರುವಂತೆ ಮಾಡಿಕೊಂಡಿದ್ದಾರೆ.

ಶ್ರೀ ಎಸ್.ಎನ್. ನಾರಾಯಣಸ್ವಾಮಿ:– ನಗರೋತ್ಥಾನ ಯೋಜನೆಗಳಲ್ಲಿ ಇಡೀ ರಾಜ್ಯದಲ್ಲಿ ಕೆಲಸ ಆಗುತ್ತಿಲ್ಲ. ಆದ್ದರಿಂದ, ಈ ಬಗ್ಗೆ ದಯಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು:– ಮಾನ್ಯ ಸದಸ್ಯರು ಹಾವೇರಿ ಜಿಲ್ಲೆಗೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿದ್ದಾರೆ.

ಶ್ರೀ ಎಸ್.ಎನ್. ನಾರಾಯಣಸ್ವಾಮಿ:– ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿಯೂ ಕೂಡ ಕೆಲಸ ಆಗಿಲ್ಲ.

ಶ್ರೀ ಕೆ.ಬಿ. ಕೋಳಿವಾಡ:– ಮಾನ್ಯ ಅಧ್ಯಕ್ಷರೆ, ನಗರೋತ್ಥಾನ ಯೋಜನೆಗಳು ಇಡೀ ರಾಜ್ಯಕ್ಕೆ ಸೇರಿದೆ. ಏಕೆ ವಿಳಂಬವಾಗಿದೆ ಎಂಬುದನ್ನು ನನ್ನ ಪ್ರಶ್ನೆಯಾಗಿದೆ. ವಿಳಂಬವಾಗಿರುವುದಕ್ಕೆ ಕೆಲವೊಂದು ಕಾರಣಗಳನ್ನು ಕೊಟ್ಟಿದ್ದಾರೆ. ಆದರೆ, ಅವುಗಳು ನಿಜವಾದ ಕಾರಣವಲ್ಲ. ನನ್ನ ಅಭಿಪ್ರಾಯದ ಪ್ರಕಾರ 1800 ಕೋಟಿ ರೂಪಾಯಿಗಳ ನಗರೋತ್ಥಾನ ಯೋಜನೆಗಳನ್ನು ಬಾಂಬೆಯ ಒಬ್ಬ ಗುತ್ತಿಗೆದಾರನಿಗೆ ಕೊಟ್ಟಿದ್ದಾರೆ. ಆತ sub-contract ಕೊಟ್ಟಿರುವುದರಿಂದ ಕೆಲಸ ಆಗಿಲ್ಲ.

ಅಧ್ಯಕ್ಷರು:– ಈಗ ಒಂದು ಕೆಲಸ ಮಾಡೋಣ.

ಶ್ರೀ ವೈ.ಎಸ್.ವಿ. ದತ್ತ:– ಮಾನ್ಯ ಅಧ್ಯಕ್ಷರೆ, ಇದು ಕೇವಲ ಹಾವೇರಿಗೆ ಸಂಬಂಧಪಟ್ಟಿರುವುದಲ್ಲ. ನಗರೋತ್ಥಾನ ಯೋಜನೆಗಳು ರಾಜ್ಯದ ಎಲ್ಲಾ ಜಿಲ್ಲೆಗಳ 224 ಕ್ಷೇತ್ರಗಳಲ್ಲಿ ಈ ಸಮಸ್ಯೆಗಳಿವೆ. ಮೊನ್ನೆದಿವಸ ಈ ವಿಷಯವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಿ ಗಲಾಟೆ ಆಗಿ ಬೈಯಿಸಿಕೊಂಡಿದ್ದೇನೆ. ಆದ್ದರಿಂದ, ನಾನು ಹೇಳುವುದೇನೆಮದರೆ, ನಗರೋತ್ಥಾನ ಯೋಜನೆಗಳಲ್ಲಿನ ಕಾಮಗಾರಿಗಳು ಆಮೆಗತಿಯಲ್ಲಿ ಹೋಗುತ್ತಿರುವುದಕ್ಕೆ ಮೂಲಕಾರಣ ಏನು? ಈ ಸಮಸ್ಯೆಯ ಮೂಲ ಬಾಲ ಎಲ್ಲಿದೆ ಎಂಬ ಬಗ್ಗೆ ಸಮಗ್ರವಾದ ಒಂದು ಚರ್ಚೆ ಆಗಬೇಕು.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ದಯಮಾಡಿ ಚರ್ಚೆಗೆ ಹಾಕಿಕೊಳ್ಳಿ.

ಅಧ್ಯಕ್ಷರು:– ಚರ್ಚೆಗೆ ಅವಕಾಶ ಕೊಡುತ್ತೇನೆ. ಮುಂದಿನ ವಾರ ಅವಕಾಶ ಕೊಡುತ್ತೇನೆ. ರೂಲ್ 69 ರಲ್ಲಿಯೆ ಹಾಕಿಕೊಳ್ಳೋಣ.

ಅವೈಜ್ಞಾನಿಕ ರಸ್ತೆ ಉಬ್ಬುಗಳು

62(34); ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ)

ಅ) ರಾಜ್ಯದ ಹೆದ್ದಾರಿಗಳಲ್ಲಿ ಅವೈಜ್ಞಾನಿಕವಾಗಿ ಹಾಕಿರುವ ರಸ್ತೆ ಉಬ್ಬು (Road Humps) ಗಳ ಕುರಿತು ರಾಜ್ಯದ ಉಚ್ಚನ್ಯಾಯಾಲಯ ತೀವ್ರವಾಗಿ ಆಕ್ಷೇಪಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಅವೈಜ್ಞಾನಿಕ ರಸ್ತೆಯ ಉಬ್ಬುಗಳನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ರಾಜ್ಯದ ಹೆದ್ದಾರಿಗಳಲ್ಲಿ ಅವೈಜ್ಞಾನಿಕವಾಗಿ ಹಾಕಿರುವ ರಸ್ತೆ ಉಬ್ಬು (Road Humps) ಗಳ ಕುರಿತು ರಾಜ್ಯದ ಉಚ್ಚನ್ಯಾಯಾಲಯ ತೀವ್ರವಾಗಿ ಆಕ್ಷೇಪಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.